1018 (1226) ಶ್ರೀ ಮಲ್ಲಿಕಾರ್ಜುನ್ ಸಿದ್ರಾಮಪ್ಪ ಖೂಬಾ (ಬಸವಕಲ್ಯಾಣ) ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ,

ಅ) ಕಳೆದ ಒಂದು ವರ್ಷದಲ್ಲಿ ಬೀದರ್ ಜಿಲ್ಲೆಯಲ್ಲಿ ಸುವರ್ಣ ಗ್ರಾಮೋದಯ ಯೋಜನೆಯಡಿಯಲ್ಲಿ ಯಾವ ಯಾವ ಅಭಿವೃದ್ಧಿ ಕಾಮಗಾರಿಗಳನ್ನು ತೆಗೆದುಕೊಳ್ಳಲಾಗಿದೆ,

ಆ) ಇದಕ್ಕಾಗಿ ಜಿಲ್ಲೆಯ ಪ್ರತಿ ವಿಧಾನ ಸಭಾ ಕ್ಷೇತ್ರಕ್ಕೆ ಬಿಡುಗಡೆ ಮಾಡಲಾದ ಹಣದ ಮೊತ್ತವೆಷ್ಟು, ಈ ಪೈಕಿ ಇಲ್ಲಿಯವರೆವಿಗೆ ಖರ್ಚು ಮಾಡಲಾಗಿರುವ ಹಣವೆಷ್ಟು,

ಇ) ಈ ಯೋಜನೆಯನ್ನು ಸಮರ್ಪಕವಾಗಿ ಅನುಷ್ಠಾನಗೊಳಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು?

ಶ್ರೀ ಸಿ ಎಂ ಉದಾಸಿ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಸಚಿವರು)

ಅ) ಯೋಜನೆಯನ್ನು 2007ರ ಫೆಬ್ರವರಿ 4ನೇ ವಾರದಲ್ಲಿ ಪ್ರಾರಂಭಿಸಲು ಉದ್ದೇಶಿಸಲಾಗಿದೆ

ಆ) ಅನ್ವಯಿಸುವುದಿಲ್ಲ

ಇ) ಪರಿಣಿತ ಸಂಸ್ಥೆಗಳಿಂದ ಕಾರ್ಯಕ್ರಮ ಅನುಷ್ಠಾನದ ಮಧ್ಯಂತರದಲ್ಲಿ ಮೌಲ್ಯಮಾಪನ ಮಾಡಲಾಗುವುದು, ಅಲ್ಲದೇ ಕಾಲಕಾಲಕ್ಕೆ ತಾಲ್ಲೂಕು ಪಂಚಾಯತ್, ಜಿಲ್ಲಾ ಪಂಚಾಯತ್ ಮತ್ತು ಸರ್ಕಾರದ ಮಟ್ಟದಿಂದ ಪರಿವೀಕ್ಷಣೆ ನಡೆಸಲಾಗುವುದು

1019 (1227) ಶ್ರೀ ಮಲ್ಲಿಕಾರ್ಜುನ್ ಸಿದ್ರಾಮಪ್ಪ ಖೂಬಾ (ಬಸವಕಲ್ಯಾಣ) ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ,

ಅ) ಬೀದರ್ ಜಿಲ್ಲೆಯಲ್ಲಿ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್/ ಇಲಾಖೆಯ ವ್ಯಾಪ್ತಿಯಲ್ಲಿ ಕೆಲಸ ನಿರ್ವಹಿಸುತ್ತಿರುವ ಕಿರಿಯ ಇಂಜಿನಿಯರ್, ಸಹಾಯಕ ಇಂಜಿನಿಯರ್ ಹಾಗೂ ಸಹಾಯಕ ಕಾರ್ಯಪಾಲಕ ಇಂಜಿನಿಯರ್ ಸಂಖ್ಯೆ ಎಷ್ಟು, ಇವರು ಯಾವ ಯಾವ ಸ್ಥಳಗಳಲ್ಲಿ ಎಷ್ಟೆಷ್ಟು ವರ್ಷಗಳಿಂದ ಕೆಲಸ ಮಾಡುತ್ತಿದ್ದಾರೆ,

ಆ) ಇವರುಗಳ ಪೈಕಿ ಎಷ್ಟು ಜನರ ಮೇಲೆ ವಿವಿಧ ಬಗೆಯ ಕರ್ತವ್ಯ ಲೋಪ ಮತ್ತು ಅವ್ಯವಹಾರಗಳ ಆರೋಪಗಳಿವೆ, ಈ ಪೈಕಿ ಎಷ್ಟು ಜನರು ಅಮಾನತ್ತಿನಲ್ಲಿದ್ದಾರೆ, ಇವರ ಮೇಲಿನ ಆರೋಪದ ವಿವರಗಳೇನು (ಪದನಾಮವಾರು ಹಾಗೂ ಹೆಸರುಗಳೊಂದಿಗೆ ಪೂರ್ಣ ವಿವರಗಳನ್ನು ಅಂಕಿ ಅಂಶಗಳಲ್ಲಿ ಒದಗಿಸುವುದು),

ಇ) ಇವರುಗಳ ಪೈಕಿ ಹಲವಾರು ವರ್ಷಗಳಿಂದ ವರ್ಗಾವಣೆಯಾಗದೆ ಜಿಲ್ಲೆಯಲ್ಲಿ ಇರುವುದು ನಿಜವಲ್ಲವೆ,

ಈ) ಹಾಗಿದ್ದಲ್ಲಿ ಇವರುಗಳನ್ನು ಬೇರೆಡೆಗೆ ವರ್ಗಾವಣೆ ಮಾಡಲು ಸರ್ಕಾರ ಕೈಗೊಳ್ಳುವ ಕ್ರಮಗಳೇನು?

ಶ್ರೀ ಸಿ ಎಂ ಉದಾಸಿ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಸಚಿವರು)

ಅ) ಬೀದರ್ ಜಿಲ್ಲೆಯಲ್ಲಿ ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ ಹಾಗೂ ಉಪ ವಿಭಾಗಗಳಲ್ಲಿ ಕೆಲಸ ಮಾಡುತ್ತಿರುವ ಇಂಜಿನಿಯರ್‌ಗಳ ವಿವರ

1) ಕಿರಿಯ ಇಂಜಿನಿಯರ್‌ಗಳು –34

2) ಸಹಾಯಕ ಇಂಜಿನಿಯರ್‌ಗಳು – 13

3) ಸಹಾಯಕ ಕಾರ್ಯಪಾಲಕ ಇಂಜಿನಿಯರ್‌ಗಳು – 06

ಒಟ್ಟು **– 53**

ಸದರಿ ಇಂಜಿನಿಯರ್‌ಗಳು ಪ್ರಸ್ತುತ ಕೆಲಸ ಮಾಡುತ್ತಿರುವ ಕಛೇರಿಯ ಸ್ಥಳಗಳು ಮತ್ತು ಯಾವ ದಿನಾಂಕದಿಂದ ಕೆಲಸ ಮಾಡುತ್ತಿದ್ದಾರೆಂಬ ಮಾಹಿತಿಯನ್ನು ಅನುಬಂಧ–1 ರಲ್ಲಿ ನೀಡಲಾಗಿದೆ

ಆ) ಅಮಾನತ್ತುಗೊಂಡ ಇಂಜಿನಿಯರ್‌ಗಳ ವಿವರ

1) ಸಹಾಯಕ ಕಾರ್ಯಪಾಲಕ ಇಂಜಿನಿಯರ್–1

2) ಸಹಾಯಕ ಇಂಜಿನಿಯರ್ – 1

3) ಕಿರಿಯ ಇಂಜಿನಿಯರ್‌ಗಳು –5

ಒಟ್ಟು **–7**

ಸದರಿ ಇಂಜಿನಿಯರ್‌ಗಳ ಮೇಲೆ ಸಂಪೂರ್ಣ ಸ್ವಚ್ಛತಾ ಆಂದೋಲನಾ ಅಡಿಯಲ್ಲಿ ಬಿಡುಗಡೆಯಾದ ಅನುದಾನ ದುರುಪಯೋಗಪಡಿಸಿಕೊಂಡ ಆರೋಪ ಇರುತ್ತದೆ ಪದನಾಮವಾರು ಹಾಗೂ ಹೆಸರುಗಳೊಂದಿಗೆ ಪೂರ್ಣ ವಿವರಗಳನ್ನು ಅನುಬಂಧ–2 ರಲ್ಲಿ ನೀಡಲಾಗಿದೆ

ಇ) ಇಲ್ಲ

ಈ) ಸರ್ಕಾರದ ವರ್ಗಾವಣೆ ನೀತಿಗೆ ಅನುಗುಣವಾಗಿ ವರ್ಗಾವಣೆಗಳನ್ನು ಮಾಡಲಾಗುತ್ತಿದೆ

ವಿಧಾನ ಸಭೆ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ.1227ರ ಅನುಬಂಧ–1

ಕ್ರಮ ಸಂಖ್ಯೆ	ಇಂಜಿನಿಯರ್‌ಗಳ ಹೆಸರು ಶ್ರೀಯುತರಾದ	ಪ್ರಸ್ತುತ ಕೆಲಸ ಮಾಡುತ್ತಿರುವ ಕಛೇರಿ ಹೆಸರು	ಯಾವ ದಿನಾಂಕದಿಂದ ಕರ್ತವ್ಯ ನಿರ್ವಹಿಸುತ್ತಿದ್ದಾರೆ
1	2	3	4
ಸಹಾಯಕ ಕಾರ್ಯಪಾಲಕ ಇಂಜಿನಿಯರ್			
1	ಮಲ್ಲಿಕಾರ್ಜುನ ಪಾಟೀಲ ಮರೂರ	ಪಂರಾಇಂ ಉಪ ವಿಭಾಗ, ಔರಾದ	30 05 05
2	ಪೋಲಾ ದತ್ತಾತ್ರೇಯ	ಪಿಎಂಜಿಎಸ್‌ವೈ ಉಪವಿಭಾಗ, ಬೀದರ್	03 12 05
3	ವಿಶ್ವನಾಥ ಪುಲೇಕರ	ಪಂರಾಇಂ ಉಪವಿಭಾಗ, ಹುಮನಾಬಾದ	15 06 06
4	ಅಶೋಕ ಶರಿಕಾರ	ಪಂರಾಇಂ ಉಪವಿಭಾಗ, ಭಾಲ್ಕಿ	17 11 04

1	2	3	4
5	ತುಕಾರಾಮ ಆರ್ ಪವಾರ	ಪಂರಾಇಂ ಉಪ ವಿಭಾಗ, ಬೀದರ್	27 04 05
6	ಕೆ ಆರ್ ಅಗ್ರೆ	ಪಂರಾಇಂ ಉಪವಿಭಾಗ, ಬಸವಕಲ್ಯಾಣ	20 08 04
	ಸಹಾಯಕ ಇಂಜಿನಿಯರ್		
1	ರಾಜಶೇಖರ ಬಿ ಮರ	ಪಂರಾಇಂ ಉಪವಿಭಾಗ, ಔರಾದ	31 12 04
2	ಮಲ್ಲಿಕಾರ್ಜುನ ಕರಂಜಿ	ಪಂರಾಇಂ ಉಪವಿಭಾಗ, ಔರಾದ	31 12 04
3	ಶಿವಾಜಿ	ಪಂರಾಇಂ ಉಪವಿಭಾಗ, ಬೀದರ್	26 12 04
4	ರಾಚಪ್ಪಾ ಪಾಟೀಲ	ಪಂರಾಇಂ ವಿಭಾಗ, ಬೀದರ್	08 07 05
5	ಮ ಅಖೀಕ್ ಅಹ್ಮದ ಖುರೇಶಿ	ಪಂರಾಇಂ ಉಪವಿಭಾಗ, ಬೀದರ್	21 02 96
6	ಬಸಯ್ಯಾ ಹಿರೇಮಠ	ಪಂರಾಇಂ ಉಪವಿಭಾಗ, ಬೀದರ್	05 06 2000

1	2	3	4
7	ತುಕಾರಾಮ ಟಿ ಎಲ್	ಪಂರಾಇಂ ಉಪವಿಭಾಗ, ಭಾಲ್ಕಿ	24 11 04
8	ಸಿ ಎಸ್ ಪಾಟೀಲ	ಪಂರಾಇಂ ಉಪವಿಭಾಗ, ಭಾಲ್ಕಿ	29 04 04
9	ಅಶೋಕ ಸಜ್ಜನಶೆಟ್ಟಿ	ಪಂರಾಇಂ ಉಪವಿಭಾಗ, ಬಸವಕಲ್ಯಾಣ	09 12 05
10	ಸಿ ವಿ ಮರ	ಪಂರಾಇಂ ಉಪವಿಭಾಗ, ಹುಮನಾಬಾದ್	30 07 06
11	ಶಿವಕುಮಾರ್ ತಳವಾಡೆ	ಪಂರಾಇಂ ಉಪವಿಭಾಗ, ಹುಮನಾಬಾದ್	04 10 06
12	ಕುಪಣ್ಣ	ಪಿಎಂಜಿಎಸ್‌ವೈ ಉಪವಿಭಾಗ, ಬೀದರ್	12 09 03
13	ಚಂದ್ರಕಾಂತ ಗಂಗಶೆಟ್ಟಿ	ಪಿಎಂಜಿಎಸ್‌ವೈ ಉಪವಿಭಾಗ, ಬೀದರ್	08 07 05
ಕಿರಿಯ ಇಂಜಿನಿಯರ್			
1	ಶಿವಕುಮಾರ್	ಪಂರಾಇಂ ವಿಭಾಗ, ಬೀದರ್	21 06 06

1	2	3	4
2	ದತ್ತಾತ್ರಿ	ಪಂರಾಇಂ ವಿಭಾಗ, ಬೀದರ್	01 02 02
3	ತಮ್ಮಣ್ಣ	ಪಂರಾಇಂ ಉಪವಿಭಾಗ, ಔರಾದ	09 11 04
4	ಶಿವರಾಜ ಪಾಟೀಲ	ಪಂರಾಇಂ ಉಪವಿಭಾಗ, ಔರಾದ	02 09 03
5	ದೇವಾನಂದ ಪಾಟೀಲ	ಪಂರಾಇಂ ಉಪವಿಭಾಗ, ಔರಾದ	10 11 04
6	ರವೀಂದ್ರ ಯರನಾಳೆ	ಪಂರಾಇಂ ಉಪವಿಭಾಗ, ಔರಾದ	22 06 06
7	ಜಾಫರ ಕಲೀಮ	ಪಂರಾಇಂ ಉಪವಿಭಾಗ, ಔರಾದ	30 05 05
8	ಬಾಲಾಜಿ ಪೋಕಲವಾರ	ಪಂರಾಇಂ ಉಪವಿಭಾಗ, ಔರಾದ	10 11 04
9	ಶೇಖರರಾಗಾ	ಪಂರಾಇಂ ಉಪವಿಭಾಗ, ಬೀದರ್	26 12 04

1	2	3	4
10	ನೀಲಕಂಠರಾಯ ಚಿಟಮೆ	ಪಂರಾಇಂ ಉಪವಿಭಾಗ, ಬೀದರ್	04 07 05
11	ಸೈಯದ್ ಖಯಾಮೋದ್ದಿನ	ಪಂರಾಇಂ ಉಪವಿಭಾಗ, ಬೀದರ್	31 12 04
12	ಅಶೋಕ ರೆಡ್ಡಿ	ಪಂರಾಇಂ ಉಪವಿಭಾಗ, ಬೀದರ್	10 06 05
13	ಕೆ ರಾಜೇಶ	ಪಂರಾಇಂ ಉಪವಿಭಾಗ, ಬೀದರ್	20 01 05
14	ಬಸವರಾಜ ಧೂಳನಗೌಡ	ಪಂರಾಇಂ ಉಪವಿಭಾಗ, ಬೀದರ್	20 06 06
15	ಧನರಾಜ ಚೌಹಾಣಿ	ಪಂರಾಇಂ ಉಪವಿಭಾಗ, ಬಸವಕಲ್ಯಾಣ	23 08 05
16	ಸುನೀಲ ಕುಮಾರ್	ಪಂರಾಇಂ ಉಪವಿಭಾಗ, ಬಸವಕಲ್ಯಾಣ	24 11 04
17	ಬಸವರಾಜ ಗುರಣ್ಣಾ	ಪಂರಾಇಂ ಉಪವಿಭಾಗ, ಬಸವಕಲ್ಯಾಣ	20 11 04

1	2	3	4
18	ಗದಿಗೆಪ್ಪಾ ಕುರಕೋಟಿ	ಪಂರಾಇಂ ಉಪವಿಭಾಗ, ಬಸವಕಲ್ಯಾಣ	30 12 04
19	ರಮೇಶ ಪಾಟೀಲ	ಪಂರಾಇಂ ಉಪವಿಭಾಗ, ಬಸವಕಲ್ಯಾಣ	13 01 03
20	ಮುರುಗೆಪ್ಪಾ ಸ್ವಾಮಿ	ಪಂರಾಇಂ ಉಪವಿಭಾಗ, ಬಸವಕಲ್ಯಾಣ	18 01 01
21	ಅಬ್ದುಲ್ ಅಜೀಜ	ಪಿಎಂಜಿಎಸ್‌ವೈ ಉಪವಿಭಾಗ, ಬೀದರ್	19 06 06
22	ಸೈಯದ ಶಾಕೀರ ರಾಜಾ	ಪಿಎಂಜಿಎಸ್‌ವೈ ಉಪವಿಭಾಗ, ಬೀದರ್	21 06 06
23	ಗುಣವಂತ ಸೂರ್ಯವಂಶಿ	ಪಂರಾಇಂ ಉಪವಿಭಾಗ, ಭಾಲ್ಕಿ	29 06 06
24	ಎನ್ ಅಶೋಕ	ಪಂರಾಇಂ ಉಪವಿಭಾಗ, ಭಾಲ್ಕಿ	10 05 05
25	ಮಾಣಿಕರಾವ್ ಕೇರೂರ್	ಪಂರಾಇಂ ಉಪವಿಭಾಗ, ಭಾಲ್ಕಿ	10 06 05

1	2	3	4
26	ಬಾಬು ಕುಲಾಲ	ಪಂರಾಇಂ ಉಪವಿಭಾಗ, ಭಾಲ್ಕಿ	05 11 01
27	ಮೊ ಕಲೀಮೊದ್ದಿನ	ಪಂರಾಇಂ ಉಪವಿಭಾಗ, ಭಾಲ್ಕಿ	15 07 05
28	ಆನಂದರಾವ್ ಮೋರೆ	ಪಂರಾಇಂ ಉಪವಿಭಾಗ, ಭಾಲ್ಕಿ	24 08 04
29	ಮಲ್ಲಿಕಾರ್ಜುನ ಮೋಳಕೇರಿ	ಪಂರಾಇಂ ಉಪವಿಭಾಗ, ಹುಮನಾಬಾದ್	10 11 04
30	ಅಲಿಸಾಬ ಇನಾಮದಾರ	ಪಂರಾಇಂ ಉಪವಿಭಾಗ, ಹುಮನಾಬಾದ್	13 06 05
31	ಇಂದುಧರ	ಪಂರಾಇಂ ಉಪವಿಭಾಗ, ಹುಮನಾಬಾದ್	25 07 05
32	ಬಸವಂತ ಗುದಗ	ಪಂರಾಇಂ ಉಪವಿಭಾಗ, ಹುಮನಾಬಾದ್	01 09 06
33	ಚಂದ್ರಕಾಂತ ರತ್ನಾಪುರೆ	ಪಂರಾಇಂ ಉಪವಿಭಾಗ, ಹುಮನಾಬಾದ್	08 08 05

1	2	3	4
34	ಪರಮೇಶ್ವರಪ್ಪ	ಪಂರಾಇಂ ಉಪವಿಭಾಗ, ಹುಮನಾಬಾದ್	21 07 2000

1029 (1094) ಶ್ರೀ ಮೋಹನ್‌ಕೃಷ್ಣ ಶೆಟ್ಟಿ (ಕುಮಟಾ) ಮಾನ್ಯ ಜಲ ಸಂಪನ್ಮೂಲ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ,

ಅ) ಉತ್ತರ ಕನ್ನಡ ಜಿಲ್ಲೆಯಲ್ಲಿ ಪಶ್ಚಿಮ ಘಟ್ಟದಲ್ಲಿ ಹುಟ್ಟಿ ಕರಾವಳಿಯಲ್ಲಿ ಹರಿದು ಅರಬ್ಬಿ ಸಮುದ್ರ ಸೇರುವ ಹಲವಾರು ನದಿಗಳಿಗೆ ಅನೇಕ ಜಲವಿದ್ಯುತ್ ಯೋಜನೆಗಳಿದ್ದರೂ ಈ ಭಾಗದ ಸ್ಥಳೀಯ ನಾಗರೀಕರಿಗೆ, ರೈತರಿಗೆ ಉಪಯುಕ್ತವಾಗುವ ಬೃಹತ್ ನೀರಾವರಿ ಯೋಜನೆಗಳನ್ನು ಈವರೆಗೆ ಕೈಗೊಳ್ಳದಿರಲು ಕಾರಣಗಳೇನು,

ಆ) ಈ ಎಲ್ಲಾ ನದಿಗಳ ನೀರು ಬಳಕೆಯಾಗದೆ ನಿರುಪಯುಕ್ತವಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ,

ಇ) ಬಂದಿದ್ದಲ್ಲಿ, ಅಘನಾಶಿನಿ, ಶರಾವತಿ ಮುಂತಾದ ನದಿಗಳಿಗೆ ಅಂತಹ ಬೃಹತ್ ನೀರಾವರಿ ಕಾಮಗಾರಿಗಳನ್ನು ಕೈಗೆತ್ತಿಕೊಂಡು ನಾಗರೀಕರಿಗೆ ಕುಡಿಯುವ ನೀರು ಹಾಗೂ ಕೃಷಿ ಭೂಮಿಗೆ ನೀರಾವರಿ ಸೌಕರ್ಯ ಒದಗಿಸುವ ಬೃಹತ್ ಯೋಜನೆ ಸರ್ಕಾರದ ಮುಂದಿದೆಯೇ,

ಈ) ಇದ್ದಲ್ಲಿ ಇಂತಹ ಯೋಜನೆ ಯಾವಾಗ ಅನುಷ್ಠಾನ ಮಾಡಲಾಗುವುದು?

ಶ್ರೀ ಕೆ ಎಸ್ ಈಶ್ವರಪ್ಪ (ಜಲ ಸಂಪನ್ಮೂಲ ಸಚಿವರು)

ಅ) ಉತ್ತರಕನ್ನಡ ಜಿಲ್ಲೆಯಲ್ಲಿ ಕಾಳಿ, ಬೇಡ್ತಿ, ಅಘನಾಶಿನಿ, ಶರಾವತಿ ಹಾಗೂ ವೆಂಕಟಾಪುರ ಎಂಬ ಐದು ಪ್ರಮುಖ ನದಿಗಳು ಹರಿಯುತ್ತಿದ್ದು, ಹೇರಳ ಜಲ ಸಂಪತ್ತು ಇದ್ದರೂ, ಅವುಗಳನ್ನು ನೀರಾವರಿಗೆ ಉಪಯೋಗಿಸಿಕೊಳ್ಳಲು ಯಾವುದೇ ಬೃಹತ್ ಅಥವಾ ಮಧ್ಯಮ ನೀರಾವರಿ ಯೋಜನೆಗಳಂತೆ ಅಣೆಕಟ್ಟುಗಳನ್ನು ಕಟ್ಟಲು ಸಾಧ್ಯವಾಗಿಲ್ಲ ಈ ಜಿಲ್ಲೆಯಲ್ಲಿ ಬಹಳ ಎತ್ತರಕ್ಕೆ ಇರುವ ಪರ್ವತಶ್ರೇಣಿ, ಕಡಿದಾದ ಮತ್ತು ಬಹು ಆಳಕ್ಕೆ